*ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ*
(Kristu Jayanti Kannada Sanshodhana Patrike)
*ಸಂಪುಟ 1, ಸಂಚಿಕೆ 2, ಸೆಪ್ಟಂಬರ್ 2022, ಪುಟಗಳು 31 – 40*

# ಜೈನ ಜನಪದ ಪದ್ಯ ಸಾಹಿತ್ಯ

**ಡಾ. ರವಿಶಂಕರ ಎ. ಕೆ.**
ಕನ್ನಡ ಸಹಾಯಕ ಪ್ರಾಧ್ಯಾಪಕ
ಕ್ರಿಸ್ತು ಜಯಂತಿ ಕಾಲೇಜು, ಕೆ. ನಾರಾಯಣ ಪುರ, ಬೆಂಗಳೂರು–77
ravishankar@kristujayanti.com

ಬಂದದ್ದು ಬರಲೆಂದು ಒಂದೇ ಭಾವದಲಿದ್ದೆ
ಬಂದದ್ದು ಕಾಯೋ ಭಗವಾನ। ನಾ ನಿನ್ನ
ಅಂಗೈ ಗೆರೆಯೊಳಗೆ ಅಡಗೇನ॥

'**ಜನವಾಣಿ ಬೇರು; ಕವಿವಾಣಿ ಹೂ**' ಎಂಬ ಬಿ. ಎಂ. ಶ್ರೀಕಂಠಯ್ಯ ಅವರ ನುಡಿಯಂತೆ ಜಾನಪದ ಸಾಹಿತ್ಯವು ಪಠ್ಯಲೋಕದ ಪಾಂಡಿತ್ಯಕ್ಕೆ ತಳಹದಿಯನ್ನು ಸೃಷ್ಟಿಸಿದ ಸಾಹಿತ್ಯವೆಂದು ಕರೆಯಬಹುದು. ಎರಡು ಸಾವಿರದ ಮೇಲೆ ಎರಡು ದಶಕಗಳ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಯಾವುದೇ ಸಾಹಿತ್ಯ ಪಠ್ಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ತಿಳಿಯುತ್ತದೆ ಆ ಪಠ್ಯವು ಆಯಾ ಪರಿಸರದ ಮೂಲ ಜನಪದರ ಕೂಸಿನಂತೆ ಗೋಚರಿಸುತ್ತದೆ. ಜಾನಪದ ಸಾಹಿತ್ಯವು ವಿಶ್ವಸಾಹಿತ್ಯವಾಗಿದೆ. ಎಲ್ಲಾ ದೇಶಗಳಲ್ಲೂ, ಎಲ್ಲಾ ಧರ್ಮಗಳಲ್ಲೂ ತಾವು ಬದುಕುವ ಪರಿಸರ ಹಾಗೂ ಜೀವನ ವಿಧಾನದ ಕೈಗನ್ನಡಿಯಾಗಿ ರೂಪಿಸಿಕೊಂಡು ಬಂದಿದ್ದಾರೆ. ಮನುಷ್ಯನ ಅನುಭವಗಳೇ ಅನುಭಾವ ಸಾಹಿತ್ಯವಾದ ಪರಿಯು ಜಾನಪದವೆಂಬ ವಿಶಾಲಕ್ಷೇತ್ರವನ್ನು ಆವರಿಸಿದೆ.

**"**ನುಡಿದದ್ದೇ ವೇದ, ನಡೆದದ್ದೇ ಯೋಗ**"** ಎನ್ನುವ ಸಹಜ ಸುಮ್ಮಾನಿಗಳ ಜೀವನದೊಳಗಿನ ತೀರ ಸಾಮಾನ್ಯ ಸಂಗತಿಗಳು ಕೂಡ ಉಳಿದವರಿಗೆ ತೀರ ಬೋಧಪ್ರದವಾಗಿರುವಂತೆ **"**ನುಡಿದದ್ದೆಲ್ಲ ಕವಿತೆ, ನಡೆದದ್ದೆಲ್ಲ ರಸ**"**ವಾಗಿ ಪರಿಣಮಿಸಿದ ರಸ ಪುರುಷರ ಅಂತರಂಗದಿಂದುಕ್ಕಿ ಬಂದ ಒಂದು ಚಿಕ್ಕ ನುಡಿಯು ಕೂಡ ಸರ್ವಸಾಮಾನ್ಯರಿಗೆ ಅರಗಳಿಗೆಯ ಮಟ್ಟಿಗಾದರೂ ಸ್ವರ್ಗದ ಸುಳಿವನ್ನು ತೋರದಿರದು.**"**[1] ಎಂಬ ಮಧುರ ಚೆನ್ನರ ನುಡಿಯಂತೆ ಶ್ರೀಸಾಮಾನ್ಯರೇ ಬದುಕು, ಆಚಾರ, ವಿಚಾರ ಪ್ರತಿಯೊಂದಕ್ಕೂ ಅರ್ಥನೀಡುವ ಸಲುವಾಗಿ ಈ ಜಾನಪದ ಕ್ಷೇತ್ರವು ದುಡಿಯುತ್ತಿದೆ. ಜಾನಪದವೆಂಬ ಸಮಗ್ರದೊಳಗೆ ಜನಪದ ಪ್ರಕಾರಗಳು ಸಾಕಷ್ಟು ರೂಪುಗೊಂಡಿವೆ. ಇವುಗಳಲ್ಲಿ ಜನಪದ ಗೀತೆಯನ್ನು ಕುರಿತು ಇಲ್ಲಿ ಗಮನಿಸುವುದಾದರೆ ಜಾನಪದ

ಕ್ಷೇತ್ರಕ್ಕೆ ವರದಾನವಾಗಿ ಎಲ್ಲಾ ಅಂಗಗಳ ದರ್ಶನ ಮಾರ್ಗವಾಗಿ ಮೂಡಿಬಂದಿದೆ. ಕಥೆ, ಆಟ, ಅಡುಗೆ, ವೈದ್ಯ ಈ ಎಲ್ಲವನ್ನು ಹಾಡಿನ ಮೂಲಕ ಪ್ರದರ್ಶನ ಮಾಡಿರುವ ಮಾದರಿಗಳೇ ನಮಗೆ ಅತಿಹೆಚ್ಚು ಕಂಡುಬರುತ್ತವೆ.

"ಜಾನಪದ ಗೀತೆಗಳೆಂದರೆ ತಾಯಿಯ ಎದೆಯಹಾಲಿನಂತೆ. ಅಮೃತದಷ್ಟು ಮಧುರವೂ ಶಕ್ತಿಯುತವೂ ಆದಂಥ ಆ ಹಾಲನ್ನು ಯಾವನು ವರ್ಣಿಸಬಲ್ಲನು? ಈ ವರೆಗೆ ಎಷ್ಟುಜನ ವರ್ಣಿಸಿದ್ದಾರೆ? ಮುಂದೆ ಯಾವಾನಾದರೂ ವರ್ಣಿಸಬಲ್ಲನೆ?"[2] ಎಂಬಂತೆ ಈ ಜನಪದ ಗೀತೆಗಳನ್ನು ವರ್ಣಿಸಲು, ವ್ಯಾಪ್ತಿ ಹಾಗೂ ಮೂಲವನ್ನು ಶೋಧಿಸುವುದು ಅತ್ಯಂತ ಕಷ್ಟಕರವಾದ ಕಾರ್ಯವೆಂದು ವಿದ್ವಾಂಸರು ತಿಳಿಸಿದ್ದಾರೆ.

"ಜನಪದ ಸಾಹಿತ್ಯಕ್ಕೆ 'ವರ್ಣಕ', 'ಬಣ್ಣವಾಡು', 'ಹಾಡುಗಬ್ಬ'ವೆಂದು ಹಳೆಯ ಹೆಸರುಗಳಿರುವವು; 'ವರ್ಣಕಕ್ಕಿಲ್ಲ' ಲಕ್ಷಣಂ ಎಂದು ವಸ್ತುಕ ಕವಿಗಳು ಅದರ ದುರ್ಲಕ್ಷಣವನ್ನು ಹೇಳುತ್ತಿದ್ದರು ವರ್ಣಕ ಕಾವ್ಯವನ್ನು ಲಕ್ಷಣಾನ್ವಿತವಾಗಿ ಮಾಡಲೆತ್ನಿಸಿದ ಪ್ರೌಢಕವಿಗಳೂ ಆಗಿ ಹೋದರು. ಲಕ್ಷಣಗಳೆಲ್ಲ ಇದ್ದು ಜೀವವಷ್ಟೇ ಇಲ್ಲದಿದ್ದರೆ ಕಾವ್ಯದ ಬದನೆಕಾಯಿಯಾಗುವದೆಂದು ಹೇಳುವ ಅಧಟ ಕವಿಗಳಾಗಿ ಹೋದರು; ವರ್ಣಕಕ್ಕೆ ಮಾನ್ಯತೆಯನ್ನು ಕಲ್ಪಿಸಿ 'ರಗಳೆಯ ಕವಿ' ಎಂದೆನಿಸಿಕೊಂಡವರೂ ಆಗಿಹೋದರು. ಇಂದು ವರ್ಣಕ ಕಾವ್ಯವು ಮತ್ತೆ ತಲೆದೋರಲಿದೆ, ಮೈದೋರಲಿದೆ. ವಸ್ತುಕದ ರೀತಿ ರಾಜಮಾರ್ಗ, ವರ್ಣಕದ ರೀತಿ ಹಳ್ಳಿಯ ಹಾದಿ. ಮೊದಲನೆಯದು ಸಂಸ್ಕೃತ, ಎರಡನೆಯದು ದ್ರಾವಿಡ; ಒಂದು ನಾಗರ, ಇನ್ನೊಂದು ಜಾನಪದ."[3] ಬೇಂದ್ರೆ ಅವರು 'ಗರತಿಯ ಹಾಡು' ಕೃತಿಗೆ ಪರಿಚಯ ನುಡಿ ಬರೆಯುವಾಗ ಹೇಳಿದ ಈ ಮಾತು ಅಂದಿನ ಬೌದ್ಧಿಕ ಜಗತ್ತು ಜಾನಪದ ಕ್ಷೇತ್ರವನ್ನು ನಿರ್ಲಕ್ಷಿಸಿದ ಬಗೆಯನ್ನು ವಿಸ್ತಾರವಾಗಿ ತಿಳಿಸುತ್ತದೆ. ಆದರೆ ಇದೇ ನುಡಿಯನ್ನು ಸೂಕ್ಷ್ಮವಾಗಿ ಅಧ್ಯಯನಮಾಡಿದರೆ ಎಲ್ಲಾ ವಸ್ತುಕ ಸಾಹಿತ್ಯದ ಹಿಂದೆ ವರ್ಣಕ ಸಾಹಿತ್ಯ ಕೆಲಸ ಮಾಡಿದೆ ಎನ್ನಬಹುದು. ರಾಮಾಯಣ, ಮಹಾಭಾರತದಂತಹ ಕಥೆಗಳು ಜನಪದ ಹಾಡುಗಾರರಲ್ಲಿ ಪಡೆದುಕೊಂಡಿರುವ ವಿಶಾಲವ್ಯಾಪ್ತಿಯು ಯಾವುದೇ ಸಂಶೋಧನೆ, ಮರುರಚನೆಗಳಿಂದ ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ.

ಈ ಜಾನಪದವೆಂಬ ಕ್ಷೇತ್ರವು ಜನರ ಜೀವನಾಡಿಯಾಗಿ ದೇಶ, ಕಾಲ, ಧರ್ಮಗಳ ಮಿತಿಯನ್ನು ಮೀರಿ ಎಲ್ಲಾ ಸೂಕ್ಷ್ಮಗಳನ್ನು ತನ್ನೊಳಗೆ ತುಂಬಿಕೊಂಡು ಹೊಸ ಸಾಧ್ಯತೆಗಳನ್ನು ಒಳಗೊಂಡು ಸಾಗಿರುವ ಕ್ಷೇತ್ರವಾಗಿದೆ. ಭಾರತೀಯ ನೆಲೆಯಲ್ಲಿ ಯೋಚಿಸುವುದಾದರೆ ಮೂವತ್ತು ಮೈಲಿಗೊಮ್ಮೆ ತನ್ನ ಅರ್ಥಸಾಂದ್ರತೆಯನ್ನು ವಿಸ್ತರಿಸಿಕೊಂಡಿರುವ ಈ ಜಾನಪದವು ಮೂಲದಲ್ಲಿ ಒಂದೇ ಬೇರಿನ ಶಕ್ತಿಯನ್ನು

ತುಂಬಿಕೊಂಡಿದೆ. ಹಿಂದೂ, ಮುಸ್ಲಿಂ, ಕ್ರೈಸ್ತರಂತೆ ಜೈನ, ಬೌದ್ಧರಲ್ಲಿಯೂ ತಮ್ಮ ಧಾರ್ಮಿಕ ವಿಚಾರಗಳಿಗೆ ಹೊಂದಿಕೆಯಾಗಿದೆ.

ಈ ಜಾನಪದ ಕುರಿತು ವಿಸ್ತಾರವಾಗಿ ಚರ್ಚಿಸಬಹುದಾದ ವ್ಯಾಪ್ತಿಯನ್ನು ಕಾಣಬಹುದು. ಈ ಮೇಲಿನ ಪೀಠಿಕೆಯ ಆಧಾರದಲ್ಲಿ ಜೈನ ಧರ್ಮದಲ್ಲಿ ಕಂಡುಬರುವ ಜನಪದ ಪದ್ಯಸಾಹಿತ್ಯವನ್ನು ಗಮನಿಸೋಣ. ಎಲ್ಲಾ ಧರ್ಮಗಳಂತೆ ಜೈನರಲ್ಲಿಯೂ ಪಠ್ಯದಾಚೆಯ ಸಾಹಿತ್ಯ ರಚನೆಯು ಕಂಡುಬರುತ್ತದೆ. ಇದು ತಮ್ಮ ಧರ್ಮದ ಜೊತೆಗೆ ಬದುಕಿನ ಅನುಭವಗಳನ್ನು ಸಂಕೇತಿಸುತ್ತದೆ. ಜೈನರಲ್ಲೂ ಬಡವರು, ಕೃಷಿಕರು ಕಂಡುಬರುತ್ತಾರೆ. ಆದರೆ ಜೈನ ಜಾನಪದವೆಂಬುದು ಕೇವಲ ಬಡವರು, ಕೃಷಿಕರಿಂದ ಮಾತ್ರ ನಿರ್ಮಾಣವಾದುದಲ್ಲ. ಜೈನರಲ್ಲಿ ಕುಟುಂಬ ವ್ಯವಸ್ಥೆಯಿಂದ ಜಿನಭವನದವರೆಗೂ ಜನಪದ ಗೀತೆಗಳ ಸ್ಪಷ್ಟರಚನೆಯನ್ನು ಕಾಣಬಹುದು. ಜೈನರ ಜಾನಪದದಲ್ಲಿ ಕಥೆಗಳು, ಹಾಡುಗಳು ಮೊದಲಾದ ಪ್ರಕಾರಗಳನ್ನು ಕಾಣಬಹುದು. ಇವರ ಜನಪದ ಹಾಡುಗಳನ್ನೇ ಪದ್ಯ ಸಾಹಿತ್ಯವಾಗಿ ಅಧ್ಯಯನಮಾಡಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಜೈನರ ಜನಪದ ಪದ್ಯ ಸಾಹಿತ್ಯ ಕುರಿತು ಮೊದಲಿಗೆ ಅಧ್ಯಯನ ಮಾಡಿದ ಸಂಶೋಧಕರೆಂದರೆ ಎಸ್. ಪಿ. ಪದ್ಮ ಪ್ರಸಾದ್ ಅವರು. 'ಜೈನ ಜಾನಪದ ಸಾಹಿತ್ಯ – ಸಂಪಾದನೆ ಹಾಗೂ ಅಧ್ಯಯನ' ಎಂಬ ಪ್ರೌಢಪ್ರಬಂಧವನ್ನು ಸಲ್ಲಿಸಿ ನಂತರವೂ ಇದರ ಸಾಧ್ಯತೆಯ ಸಮಗ್ರ ಕಾರ್ಯ ಮಾಡಿದ್ದಾರೆ. ಇವರ ಈ ಕಾರ್ಯವೇ ಇಂದು ಜೈನ ಜನಪದ ಸಾಹಿತ್ಯ ಅಧ್ಯಯನಕ್ಕೆ ಮುಖ್ಯ ಆಕರವಾಗಿದೆ. ಜೈನ ಜನಪದ ಗೀತೆಗಳನ್ನು ಸಂಪಾದಿಸಿದ್ದಾರೆ. ಈ ಕಾರ್ಯದಲ್ಲಿ ಇದುವರೆಗೂ ನಡೆದಿರುವ ಸಂಗ್ರಹಕಾರ್ಯಗಳನ್ನು ಅವಲೋಕಿಸಿದ್ದಾರೆ. ಇಂತಹ ಆಕರಗಳನ್ನು ಮುಂದಿವರೆಸುವ ಕಾರ್ಯ ಇಂದಿನ ಅಧ್ಯಯನಗಳಿಗೆ ಮೂಲೋದ್ದೇಶವಾಗಿದೆ.

"ಸಾಮಾನ್ಯ ದೃಷ್ಟಿಯಲ್ಲಿ 'ಮುಂದುವರೆದ ಜನಾಂಗ' ಎಂದು ಪರಿಗಣಿತವಾದ ಜೈನಧರ್ಮೀಯರಲ್ಲಿಯೂ ಸಾಕಷ್ಟು ಜನ ರೈತರು, ರೈತ ಕಾರ್ಮಿಕರು, ಹಾಗೂ ಶೈಕ್ಷಣಿಕವಾಗಿ ಹಿಂದುಳಿದವರಿದ್ದಾರೆ, ಈ ದೇಶದ ಹಾಗೂ ಕರ್ನಾಟಕದ ಒಟ್ಟು ಜೈನ ಜನಸಂಖ್ಯೆಯಲ್ಲಿ ಶೇ 80ರಷ್ಟು ಜನ ಗ್ರಾಮೀಣ ಪ್ರದೇಶದಲ್ಲಿರುವವರಾಗಿದ್ದಾರೆ. ಹೀಗಾಗಿ ಚೆನ್ನಾಗಿ ವಿಕಸಿತವಾದ ತಾತ್ವಿಕ ದರ್ಶನವೊಂದನ್ನು ಹೊಂದಿದ್ದೂ ಸಹ ಜೈನ ಸಮುದಾಯ ಪೂರ್ಣ ಶಿಷ್ಟವೇನೂ ಆಗಿರದೆ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಜಾನಪದೀಯತೆಯನ್ನು ಉಳಿಸಿಕೊಂಡಿರುವ ಸಮುದಾಯವಾಗಿದೆ. ಇವರ ವಿಕಸಿತ ತಾತ್ವಿಕತೆ ಸಾಮಾನ್ಯರಾದ ಗ್ರಾಮೀಣ ಮತ್ತು ಅವಿದ್ಯಾವಂತ ಜೈನರ ಮಟ್ಟಕ್ಕೆ ಎಷ್ಟರ ಮಟ್ಟಿಗೆ ಹರಿದು ಬಂದು ಬೇರೂರಿದೆ ಎಂಬುದನ್ನು

ಇವರ ಜನಪದ ಸಾಹಿತ್ಯ ತೋರಿಸಿಕೊಡುತ್ತದೆ."[4] ಈ ಪೀಠಿಕೆಯು ಜೈನ ಜನಪದ ಸಾಹಿತ್ಯ ಕುರಿತು ಅರ್ಥಪೂರ್ಣವಾಗಿ ತಿಳಿಸುತ್ತದೆ.

ಜೈನ ಜನಪದ ಗೀತೆಗಳು ಕನ್ನಡ ಸಾಹಿತ್ಯದಲ್ಲಿ ಇತರ ಜನಪದ ಗೀತೆಗಳಂತೆ ರಚನೆಯಾಗಿದ್ದರೂ ವಿಚಾರ ಹಾಗೂ ಆಶಯದಲ್ಲಿ ಅಹಿಂಸೆ, ದರ್ಶನ, ಪೂಜಾವಿಧಿ, ತ್ರಿಷಷ್ಠಿ ಶಲಾಕಾ ಪುರುಷರ ಕಥೆ, ರತ್ನತ್ರಯಗಳು, ಜೈನವ್ರತಗಳು, ಹೆಸರುಗಳು ಮುಖ್ಯವಾಗಿ ಉಲ್ಲೇಖಿಸುತ್ತಾರೆ. ಈ ಉಲ್ಲೇಖಗಳ ಆಧಾರದ ಮೇಲೆ ಜೈನ ಧರ್ಮದ ವಿಷಯಗಳನ್ನು ಜನಪದ ಗೀತೆಗಳಲ್ಲಿ ಗುರ್ತಿಸಬಹುದು. ಈ ಗೀತೆಗಳಲ್ಲಿ ಪ್ರಾದೇಶಿಕವಾದ ಸಂಸ್ಕೃತಿ, ಆಚಾರ ವಿಚಾರಗಳು ಹೆಚ್ಚು ಪ್ರಭಾವಿಸಿವೆ. ಡಾ. ಎಸ್. ಪಿ. ಪದ್ಮಪ್ರಸಾದ್ ಅವರು ಈ ಜನಪದ ಗೀತೆಗಳನ್ನು ಏಳು ವಿಭಾಗಗಳಾಗಿ ವಿಂಗಡಿಸಿದ್ದಾರೆ. ಈ ವಿಂಗಡಣೆಯನ್ನು ಅಧ್ಯಯನಮಾಡಿದಾಗ ನಮಗೆ ಎರಡು ರೀತಿಯ ಹಾಡುಗಳು ಮುಖ್ಯವಾಗುತ್ತವೆ. ಕುಟುಂಬ ಸಂಬಂಧಿತ ಗೀತೆಗಳು. ಹಾಗೂ ಯಕ್ಷ/ಯಕ್ಷಿ ಅಥವಾ ಜಿನ ತತ್ವಕ್ಕೆ ಸಂಬಂಧಿಸಿದ ಗೀತೆಗಳು. ಈ ಗೀತೆಗಳಲ್ಲಿ ಜೈನರ ಧಾರ್ಮಿಕ ಕ್ಷೇತ್ರಗಳು ಮುಖ್ಯವಾಗಿ ಎಲ್ಲಾ ಗೀತೆಗಳ ಮೇಲೆ ಪ್ರಭಾವ ಬೀರಿವೆ. ತ್ರಿಪದಿ, ದ್ವಿಪದಿ ಹಾಗೂ ಕಥಾಮಾದರಿಯ ಛಂದೋಶೈಲಿಗಳೂ ಇಲ್ಲಿ ಕಂಡುಬರುತ್ತವೆ.

ಜೈನ ಜನಪದ ಗೀತೆಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಮೂಲಕ ಚರ್ಚಿಸಬಹುದು. ಇವರ ಗೀತೆಗಳಲ್ಲಿ ಒಂದು ಸಂಭ್ರಮ, ಭಕ್ತಿ ಹಾಗೂ ವೈರಾಗ್ಯಗಳೇ ಹೆಚ್ಚು ಕಂಡುಬರುತ್ತವೆ. ಜೈನಜನಪದದಲ್ಲಿ ಹಸಿವು, ಬಡತನ ಹಾಗೂ ಶೋಷಣೆಯ ಅಭಿಮುಖಗಳನ್ನು ಕಾಣಲಾಗದು. ಕುಟುಂಬ ನಿರ್ವಹಣೆ, ತೀರ್ಥಯಾತ್ರೆ, ಪೂಜೆ, ವ್ರತ ಮೊದಲಾದ ಕಾರ್ಯಗಳನ್ನು ತಮ್ಮ ಗೀತೆಗಳಲ್ಲಿ ತಿಳಿಸುತ್ತಾರೆ. ಭಕ್ತಿಯೇ ಜೈನರ ಗೀತೆಗಳ ಪ್ರಧಾನ ಭೂಮಿಕೆ. ವಿವಾಹಕ್ಕೆ ಸಂಬಂಧಿಸಿದ ಗೀತೆಗಳಲ್ಲಿ ಹಲವು ರೀತಿಯ ಸಂಪ್ರದಾಯಗಳನ್ನು ಒಳಗೊಂಡಂತೆ ಪ್ರತ್ಯೇಕವಾಗಿ ಕಂಡುಬರುತ್ತವೆ. ವಿವಾಹಕ್ಕೆ ಸಂಬಂಧಿಸಿದಂತೆ ಬರುವ ಹಲವು ಆಚರಣೆಗಳಲ್ಲಿ ಕೆಲವು ಆಚರಣೆಗಳಿಗಾಗಿಯೇ ಸಿದ್ಧಗೊಂಡ ಗೀತೆಗಳನ್ನು ಕಾಣಬಹುದು.

ಬಾಸಿಂಗ ಕಟ್ಟುವ ಹಾಡು ಎಂಬುದು ಒಂದು ಬಾಸಿಂಗವನ್ನು ಕುರಿತು ಹೇಳುವುದಾದರೂ ಇದು ಕೇವಲ ಬಾಸಿಂಗವಾಗಿರದೆ ಹುಮ್ಮುಚದ ಅಕ್ಕ ಪದ್ಮಾವತಿಯವರು ಕಳುಹಿಸಿರುವ ಬಾಸಿಂಗವಿದು ಎಂಬ ಪ್ರತೀತಿ ಇದೆ.

"ಬಟ್ಟಲೊಳಗಿರುವ ಪುಟ್ಟಮಣಿ ಬಾಸಿಂಗ
ಈಗ್ಯಾರು ಕೊಟ್ಟು ಕಳುಹ್ಯಾರೆ । ಹುಮ್ಮುಚದ

ಅಕ್ಕ ಪದ್ಮಮ್ಮ ಕಳುಹ್ಯಾರೆ॥"

ಇದೊಂದು ಸೋಬಾನೆ ಗೀತೆಯ ರೂಪದಲ್ಲಿ ಕಂಡುಬರುವ ಹಾಡಾಗಿದೆ. ಈ ಬಾಸಿಂಗವನ್ನು ಪದ್ಮಾವತಿಯವರು ಅರಸಿ ಕಳುಹಿಸಿದ್ದಾರೆ ಎನ್ನುವ ಮೂಲಕ ಜೈನ ಯಕ್ಷ ದೇವತೆಯ ಆಶೀರ್ವಾದವಿದೆ ಎಂಬ ಸಂದೇಶ ನೀಡಿದ್ದಾರೆ. ಮದುವೆಯ ಪ್ರತಿ ಪ್ರಸಂಗಕ್ಕೂ ಕಂಡುಬರುವ ಹಾಡುಗಳನ್ನು ಜನಪದರು ನಿರ್ಮಿಸಿದ್ದಾರೆ.

'ಆಶೀರ್ವಾದದ ಹಾಡು'ವಿನಲ್ಲಿ ವಧೂವರರಿಗೆ ಸೇಸೆ ಇಕ್ಕುವ ಪ್ರಸಂಗ ಬರುತ್ತದೆ. ಆ ಸಂದರ್ಭದಲ್ಲಿ ಮಂಗಳಾಕ್ಷತೆ ಇಡುವಾಗ ಹಾಡುತ್ತಾರೆ. ಈ ಹಾಡಿನ ಕೊನೆಗೆ "ಒಳಗೆ ಒಳ್ಳೆಯವಳಾಗು, ಹೊರಗೆ ಬಲೀಂದ್ರನಾಗು, ಅತ್ತೀಗು ಮಾವಗೂ ಸತ್ಯವಂತವಳಾಗು" ಎಂಬ ಆಶೀರ್ವಾದದ ಸಾಲು ಬರುತ್ತದೆ. ಇದರಲ್ಲಿ ದಕ್ಷಿಣಕನ್ನಡದ ಬಲೀಂದ್ರನ ಹೆಸರು ಉಲ್ಲೇಖವಾಗುತ್ತದೆ. ಈ ಬಲೀಂದ್ರನು ಹಿಂದೂ ಪುರಾಣದಲ್ಲಿ ಬರುವ ರಾಜನ ಹೆಸರು. ಆದರೆ ಜೈನರಲ್ಲಿಯೂ ಬಲೀಂದ್ರನ ಉಲ್ಲೇಖ ವಿಶೇಷವಾದುದು.

ಧಾರೆಯ ಹಿಂದಿನ ದಿನದ ಶಾಸ್ತ್ರದಲ್ಲಿ ಉಡಿ ತುಂಬುವಾಗ ಹಾಡುವ ಹಾಡು (ಸುವ್ವಿ ಹಾಡು), ಧಾರೆಯ ದಿನ ಮುಂಜಾನೆ ಎಚ್ಚರದ ಸಮಯದಲ್ಲಿ ಹಾಡುವ ಹಾಡು. ಈ ಹಾಡಿನಲ್ಲಿ ಜಿನಬಿಂಬದ ಉಲ್ಲೇಖ ವಿಶೇಷವಾಗಿ ಕಂಡುಬಂದಿದೆ.

"ಆಯಾದಡ್ಡ ಗೋಡೆ ಬೀಯದು ದೇವರ ಕ್ವಾಣಿ

ಮಲ್ಲೀಗೆ ಸರದೊಳಗೆ ಜ್ಯಿನ್ಯಬಿಂಬ। ಬಿಡಿಸಿದ್ದ

ತೀರ್ಥಂಕರ ಕಂಡೆ ಕ್ಯನ್ಯಸೀಲಿ." ಎಂಬ ಹಾಡಿನ ಮೂಲಕ ತೀರ್ಥಂಕರನನ್ನು ನೆನಪಿಸಿಕೊಳ್ಳುವ ಹಾಡುಗಳು ಕಂಡುಬರುತ್ತವೆ. ಎಣ್ಣೆ ಅರಿಶಿಣ ಹಚ್ಚುವ ಹಾಡುಗಳಲ್ಲಿಯೂ ಜಿನನ ನೆನಿಕೆ ಈ ರೀತಿಯಾಗಿ ಕಂಡುಬರುತ್ತದೆ.

"ಜೀರಿಗೆ ಸಾಲಕ್ಕಿ ದೇವರ ಪೂಜೆಗಿಟ್ಟು

ಆಯನಾರೊಳ್ಳೆ(ಆವಿನಹಳ್ಳಿ) ಕರವುರದ(ಕರೂರು) ಬಸ್ತೀಲಿ

ಪಾರಿಶ್ವ ಜಿನರ ಬಲಗೊಂಬೆ॥" ಎನ್ನುವಾಗ ಸಾಗರ ತಾಲ್ಲೂಕಿನಲ್ಲಿ ಕಂಡುಬರುವ ಈ ಆವಿನಹಳ್ಳಿ, ಕರೂರು ಮೊದಲಾದ ಗ್ರಾಮಗಳು ಉಲ್ಲೇಖವಾಗುವುದು ವಿಶೇಷ. ಜನಪದ ಹಾಡುಗಾರರಿಗೆ ಸ್ಥಳೀಯ ದೇವರ ಶಕ್ತಿಯ ಮೇಲೆ ಹೆಚ್ಚು ನಂಬಿಕೆ. ದೂರದಲ್ಲಿರುವ ದೇವರು ಹರಕೆಯ ಬಿಂಬವಾಗಿ ನಂಬಿಕೆ ಹೊಂದಿರುತ್ತವೆ. ಸಂಪ್ರದಾಯದ ಜೊತೆಗೆ ದೇವರ ಭಕ್ತಿ ಎರಡನ್ನೂ ಸಮಪ್ರಮಾಣವಾಗಿ ನಡೆಸುವ ಧರ್ಮವಾಗಿ ಜೈನ ಧರ್ಮ

ಕಂಡುಬರುತ್ತದೆ. ಎಣ್ಣೆ ಹರಿಶಿಣ ಹಚ್ಚುವಾಗ ಒಬ್ಬೊಬ್ಬರೂ ಹಚ್ಚುವಾಗ ಒಂದೊಂದು ಹಾಡಿನಂತೆ ಹಲವು ರಚನೆಗಳು ಕಂಡುಬರುತ್ತವೆ. ಹಿಂದೂ ಧರ್ಮಕ್ಕೂ ಹಾಗೂ ಜೈನಧರ್ಮಕ್ಕೂ ಪೂಜಾ ಕಾರ್ಯದಲ್ಲಿ ವಿಧಾನಗಳಲ್ಲಿ ಮಾತ್ರ ಭಿನ್ನವಾಗಿ ಕಂಡುಬರುತ್ತವೆ. ಹೀಗೆ ಅಕ್ಷತೆ ಇಡುವ ಹಾಡು, ಮದುಮಕ್ಕಳ ಕೈಮೇಲೆ ಅಕ್ಕಿ ಹಾಕುತ್ತಾ ಹೇಳುವ ಹಾಡು, ಉಡಿತುಂಬುವ ಹಾಡು ಮೊದಲಾದ ಸಂಪ್ರದಾಯಗಳ ಆಚರಣೆಯ ಸಂದರ್ಭದಲ್ಲಿ ಹಾಡುವ ಹಾಡುಗಳನ್ನು ಕಾಣಬಹುದು.

ನಾಮಕರಣದ ಸಂದರ್ಭದಲ್ಲಿ ಪ್ರಕೃತಿಯ ಚಿತ್ರಣವನ್ನು ಉಯ್ಯಾಲೆ ಹಾಡುಗಳಲ್ಲಿ ಬಳಸಿದ್ದಾರೆ.

"ಮಲ್ಲೀಗೆ ವನ ಉಯ್ಯಾಲೆ। ಅಂತಪ್ಪ, ನಂಕುಡಿಗೆ ನವಲುಯ್ಯಾಲೆ॥
ನಾವೇದ್ಧ ರಣೇರುಯ್ಯಾಲೆ। ಅಂತಪ್ಪ, ನಾವ್ಹೋತೀಂವಿ ಶಾಂತಿ ತೀರ್ಥಂಕ್ರ ಬಳಿಗೆ
ವನಿವನಿ ವನೆಯುತಿರಲು । ತೆನಿಬಂದು ಧರಣೇಂದ್ರಗೆರಗುತಿರಲು"

ಹೀಗೆ ಸಂಪೀಗೆ ಉಯ್ಯಾಲೆ, ಸಾವಂತಿಗ್ಹೂವುಯ್ಯಾಲೆ ಮೊದಲಾದ ರೀತಿಯಲ್ಲಿ ಮಗುವಿಗೆ ತೊಟ್ಟಿಲ ಶೃಂಗಾರ ಕುರಿತು ಹಾಡುತ್ತಾರೆ.

ಪೂಜೆ/ವ್ರತಗಳಿಗೆ ಸಂಬಂಧಿಸಿದ ಗೀತೆಗಳಲ್ಲಿ ಜೈನರ ಪದ್ಧತಿಗಳನ್ನು ವರ್ಣಿಸಿದ್ದಾರೆ. ಇವು ಭಕ್ತಿ ಹಾಡುಗಳಾಗಿ ಕಂಡುಬರುತ್ತವೆ. ಆದರೆ ಜನಪದರು ತಮ್ಮ ನಿತ್ಯದ ಬದುಕನ್ನು ಸಂಪ್ರದಾಯ, ಜಿನಬಸದಿಗಳ ಚಿತ್ರಣದೊಂದಿಗೆ ನೀಡಿದ್ದಾರೆ.

"ಬಸದಿ ಬಾಗಿಲ ಮುಂದೆ ಬಿಸಿಲು ಬಂದಲ್ಲದೆ
ಮೊಸರು ಉಣವಲ್ರು ಜೈನ್ಯರು । ತಮ್ಮಯ್ಯ
ಚಿಕ್ಕವ್ನು ವ್ರತದ ನಡಿಸ್ಯಾನೆ॥
ನಮ್ಮೂರ ಬಸ್ತೀಗೆ ಒಂಬತ್ತು ಬಾಗಿಲು
ತುಂಬ ಕುಂತಾರ ಜೈನರು। ನನಕಂದ
ಜೈ ಎಂದು ಪೂಜೆ ನಡೆಸೀದ॥"

ಈ ರೀತಿಯಲ್ಲಿ ಸಂಪ್ರದಾಯ, ನಿತ್ಯ ವ್ರತಗಳನ್ನು ತಮ್ಮ ಜನಪದದ ಶೈಲಿಯಲ್ಲಿ ಹಾಡುತ್ತಾರೆ. ಬಸದಿ ಎಂದರೆ ಜೈನರು ವಾಸಿಸುವ ವ್ರತ ನಿಷ್ಠೆಯ ಮನೆಗಳು. ಮನೆಯಲ್ಲಿ ಯಾರಾದರೂ ವ್ರತವಿದ್ದಾಗ ನೀರಿ ಸೋಸೊ ಕುಡಿಯುವ, ಹೊಸಿಲಿಗೆ ಬಿಸಿಲು ಮೂಡುವ ತನಕ ಮೊಸರು ತಿನ್ನಲಾರದ ಆಚರಣೆ ಅನುಸರಿಸುತ್ತಾರೆ.

"ಮುತ್ತೈದೆ ಮೂಗುತಿ ಅಪ್ಪಯ್ಗೆಯಿ ಕೊಟ್ರೆ

ಸಂಪುಟ 1, ಸಂಚಿಕೆ 2, ಸೆಪ್ಟಂಬರ್ 2022, ಪುಟಗಳು 31 – 40

ಮುತ್ತೈದೆತನವ ಸಿವ ಕೊಟ್ರೆ। ಹುಂಬುಚದ
ಗುರುಸ್ವಾಮಿ ಕೊಟ್ರೆ ವ್ರತಗೋಳ॥ ಇಲ್ಲಿ ಬಳಕೆ ಮಾಡಿರುವ ಶಿವ ಎಂಬುದು ಪ್ರಾದೇಶಿಕವಾಗಿ ದೇವರನ್ನು ತನ್ನ ಜನಪದದಲ್ಲಿ ತಂದಿರುವುದಾಗಿ ಕಾಣಬಹುದು. ಹರಿ, ಹರರು ಹಲವು ಕಾರಣಗಳಿಂದ ಜೈನರ ಹಾಡುಗಳಲ್ಲಿ ಪ್ರವೇಶ ಮಾಡುವ ಪ್ರಸಂಗವು ಕಂಡುಬರುತ್ತದೆ. ಇದಕ್ಕೆ ಒಂದು ಕಥೆ ದೊರೆಯುತ್ತದೆ. ಹುಂಬುಚದ ಮುತ್ತಿನ ಕೆರೆಯಲ್ಲಿ ಜಟ್ಟಿಂಗರಾಯನಿಗೆ ಎರಡು ಮುತ್ತಿನ ಮೂಗುತಿ ಸಿಗುತ್ತದೆ. ಚೆನ್ನಾಗಿರುವುದನ್ನು ದೇವರಿಗೆ, ಚೆನ್ನಾಗಿಲ್ಲದ ಮುತ್ತನ್ನು ತನ್ನ ಹೆಂಡತಿಗೆ ನೀಡಬೇಕಾದ ನಿಯಮವಿದ್ದರೂ ಅದರ ವಿರುದ್ದವಾಗಿ ನೀಡುತ್ತಾನೆ. ಹುಂಬುಚದ ಗುರುಸ್ವಾಮಿಯು ಈ ವ್ರತ ಮೂಲಕ ಆಸೆಯಿಂದ ಮುಕ್ತಿ ಪಡೆಯುವ ಸಂಸಾರದ ದುಃಖ ಕಳೆಯುವ ಜನಪದರ ಕಥೆಗಳು ಇಂದಿಗೂ ಪ್ರಚಲಿತ ಇವೆ.

ಪೂಜೆಗೆ ಸಂಬಂಧಿಸಿದ ಭಕ್ತಿ ಹಾಡುಗಳು ಜನಪದ ಮಾದರಿಯಲ್ಲಿಯೇ ಕಂಡುಬರುವ ಕೆಲವು ಹಾಡುಗಳಿವೆ. ನಿತ್ಯ ಪೂಜೆ ಮಾಡುವ ಹಾಡು, ಪೂಜೆಗಾಗಿ ಬಸದಿಗೆ ಹೋಗುವ ಹಾಡು, ಅಷ್ಟವಿಧಾರ್ಚನೆ ಹಾಡು, ಪೂರ್ಣಾಹುತಿ ಹಾಡು(ಗೃಹಶಾಂತಿ, ಗೃಹಪ್ರವೇಶ ಸಂದರ್ಭದಲ್ಲಿ) ಭದ್ರಬಾಹು ಮುನೀಶ್ವರರಿಗೆ ಆಹಾರದಾನದ ಹಾಡು, ಪಂಚಾಮೃತಾಭಿಷೇಕದ ಹಾಡು, ಅಭಿಷೇಕದ ಹಾಡು, ಹರಕೆ ಒಪ್ಪಿಸುವ ಹಾಡು, ನೇಮಿಶ್ವರ ಸ್ವಾಮಿ ದೀಕ್ಷೆಗೆ ಹೋಗುವ ಹಾಡು, ಅಕಲಂಕಸ್ವಾಮಿ ದೀಕ್ಷೆ ಹಾಡು ಈ ಎಲ್ಲಾ ಭಕ್ತಿ ಕುರಿತಾದ ಹಾಡುಗಳು ಮನುಷ್ಯನ ಜ್ಞಾನಮಾರ್ಗವನ್ನು ಹಿಡಿಯಲು ಸೂಕ್ತಿಯಂತೆ ಜನಪದರು ತಿದ್ದಿದ್ದಾರೆ. ಇಲ್ಲಿ ಬೋಧನೆಗಳಿವೆ. ತಮಗೇ ಅನ್ವಹಿಸಿಕೊಳ್ಳುವ ಅನುಭವಗಳು, ದುಃಖ ದುಮ್ಮಾನದ ನಿವೇದನೆಗಳು ಕಾಣಲಾಗದು. ಇಲ್ಲಿನ ಕೆಲವು ಹಾಡುಗಳು ಕಥನಗೀತೆಗಳಂತೆ ವಿಸ್ತಾರವಾದ ಕಥನಶೈಲಿಯಲ್ಲಿ ಮೂಡಿಬಂದಿವೆ. 'ಜೈನ ಸಂಸ್ಕೃತಿ' ತಿಳಿಸುವ ಜನಪದ ಗೀತೆಯಲ್ಲಿ ಜೈನರ ನಂಬಿಕೆ, ಮನೋಧರ್ಮ, ಸಂಪ್ರದಾಯಗಳನ್ನು ಅಭಿವ್ಯಕ್ತಪಡಿಸುವ ವಿಚಾರಗಳು ಈ ಗೀತೆಯಲ್ಲಿ ಕಂಡುಬರುತ್ತದೆ.

"ಹರ್‍ಯಾಗ ಏಳುತು ಯಾರನ್ನ ನೆನಿಯಾಲಿ
ಅರಹಂತ ಸಿದ್ಧ ಭಗವಂತ। ನೆನಸಿದರ
ಧಕ್ಕನ ಆರಾವು ಮೋಕ್ಷ॥
ಜಾತೀಲಿ ಜೈನರ ಮಾತಲಿ ಶಾಣ್ಯಾರ
ತಾಸ ಕಟ್ಯಾರ ಹೊಸಪ್ಯಾಟಿ। ಬಸ್ತಿಮ್ಯಾಗ
ಬಂಗಾರದ ಕಳಸ ಏರಿಸ್ಯಾರ॥

ಭಾವ ಮೈದುನರು ದೇವರಿಗೆ ಸಮಕಾಣೇ

ಪಾದs ತಾಗಿದರೆs ಸರಣೆನ್ನೆ । ತಂಗ್ಯಮ್ಮ

ವಾಲೇಯ ಭಾಗ್ಯs ಹರಿಸ್ಯಾರೆ॥"

ಈ ಮೂರು ಪದ್ಯಗಳನ್ನು ಮಾದರಿಗಾಗಿ ಆಯ್ಕೆ ಮಾಡಿಕೊಂಡಿರುವೆ. ಮೊದಲ ಪದ್ಯವು 'ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ' ಎಂಬ ಜನಪದಗೀತೆಯನ್ನು ನೆನಪಿಸುತ್ತದೆ. ಅರಹಂತ ಸಿದ್ಧ ಭಗವಂತನ ನೆನೆದಾರೆ ಮೋಕ್ಷವು ಸಿಗುತ್ತದೆ ಎಂದು ಹಾಡಿದ್ದಾರೆ. ಸರ್ವ ಜಾತಿಗಳಲ್ಲಿ ಜೈನನೆಂಬ ಜಾತಿಯು ಬುದ್ದಿವಂತ ಹಾಗೂ ಬಸದಿಗಾಗಿ ಬಂಗಾರದ ಕಳಸ ಮೂಡಿಸುವ ಕಾರ್ಯ ಮಾಡುತ್ತಾನೆ ಎಂಬ ಧರ್ಮ ಸಂಸ್ಕಾರವನ್ನು ತಿಳಿಸುತ್ತಾರೆ. ಗಂಡನ ಮನೆಯಲ್ಲಿ ಪರಪುರುಷರ ಕುರಿತು ಹೊಂದಿರಬೇಕಾದ ಗೌರವವನ್ನು ತಂಗಿಗೆ ಹೇಳುವ ನುಡಿ ಇಲ್ಲಿ ಜನಪದ ಹಾಡುಗಾರರು ಹಾಡಿದ್ದಾರೆ.

ಯಕ್ಷಯಕ್ಷಿಯರಿಗೆ ಸಂಬಂಧಿಸಿದ ಗೀತೆಗಳು ಈಗಾಗಲೇ ದೊರೆತಿರುವ ಹಾಡುಗಳಲ್ಲಿ ಹೆಚ್ಚಿನವು. ಧರಣೇಂಧ್ರ ಮತ್ತು ಪದ್ಮಾವತಿಯರಿಗೆ ಸಂಬಂಧಿಸಿದ ಹಾಡುಗಳಲ್ಲಿ ಇವರನ್ನು ಪೂಜಿಸುವ ಆರತಿ ಹಾಡುಗಳು, ಹಸೆಗೆ ಕರೆಯುವ ಹಾಡು, ಶೋಭಾನೆ ಹಾಡು, ಓಕುಳಿಹಾಡು, ಭತ್ತ ಕುಟ್ಟುವ ಹಾಡುಗಳು, ಬೀಸುವ ಹಾಡುಗಳು, ಮಕ್ಕಳಾಡಿಸುವ ಹಾಡು, ಪದ್ಮಾವತಿ ದೇವಿ ಧರೆಗಿಳಿದ ಹಾಡುಗಳು, ಪ್ರಾರ್ಥನೆ ಹಾಡುಗಳು, ಕಂದನ ಬೇಡುವ ಹಾಡುಗಳು, ದೇವಿಯ ಕುರಿತು ಕೋಲಾಟದ ಹಾಡುಗಳು, ಬಳೆ ತೊಡುವ ಹಾಡುಗಳು, ಪದ್ಮಾವತಿ ದೇವಿ ಬಳೆ ಇಡುವ ಹಾಡು ಈ ಎಲ್ಲಾ ಹಾಡುಗಳು ಪದ್ಮಾವತಿಯ ಶೃಂಗಾರವೇ ನಮ್ಮ ಶೃಂಗಾರವೆಂಬಂತೆ ಬದುಕನ್ನು ಚಿತ್ರಿಸಿದ್ದಾರೆ.

ಈ ಯಕ್ಷಯಕ್ಷಿಯರು ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುತ್ತಾರೆ ಎಂಬ ನಂಬಿಕೆ ಇದೆ. ಐತಿಹ್ಯಗಳು ಕಥೆಗಳ ರೂಪದಲ್ಲಿ ಪ್ರಚಲಿತವಿರುವಂತೆ ಇದೇ ಕಥೆಗಳು ಹಾಡುಗಳಾಗಿಯೂ ಮೂಡಿಬಂದಿವೆ. ಜೈನರಲ್ಲಿ ತೀರ್ಥಂಕರರಂತೆ ಯಕ್ಷಯಕ್ಷಿಯರೂ 24ಜನರಿದ್ದಾರೆ. ಇವರಲ್ಲಿ ಪ್ರಸಿದ್ಧರಾದ ಕೆಲವರನ್ನು ಮಾತ್ರ ಅವರವರ ಸ್ಥಳಗಳ ಆಧಾರದ ಮೇಲೆ ಜನಪದ ಹಾಡುಗಳನ್ನು ಕಟ್ಟಿ ಹಾಡಿದ್ದಾರೆ. ಧರಣೇಂದ್ರ– ಪದ್ಮಾವತಿ, ಶ್ಯಾಮ–ಜ್ವಾಲಾಮಾಲಿನಿ, ಕೂಷ್ಮಾಂಡಿನಿ ಯಕ್ಷಿ, ಬ್ರಹ್ಮಯಕ್ಷರ ಕುರಿತು ಹೆಚ್ಚು ಆರಾಧನೆಯನ್ನು ಕಾಣಬಹುದು. ಈ ದೇವತೆಗಳನ್ನು ಶಾಸನ ದೇವತೆಗಳೆಂದು ಕರೆಯಲಾಗುತ್ತದೆ.

ಇತರ ಯಕ್ಷ ಯಕ್ಷಿಯರಾದ ಜ್ವಾಲಾಮಾಲಿನಿ ದೇವಿ, ಚಕ್ರೇಶ್ವರಿ, ಬ್ರಹ್ಮದೇವ–ಸರಸ್ವತಿ, ಕ್ಷೇತ್ರಪಾಲ ಮೊದಲಾದ ಯಕ್ಷಯಕ್ಷಿಯರನ್ನೂ ಕುರಿತು ಕೆಲವುಕಡೆ ಪದಕಟ್ಟಿ ಹಾಡುವುದಿದೆ. ಜೈನರ ಪ್ರಸಿದ್ಧ ಯಾತ್ರಾ

ಸ್ಥಳಗಳಾದ ಶ್ರವಣಬೆಳಗೊಳ, ಶಿವಮೊಗ್ಗಜಿಲ್ಲೆಯ ಹೊಸನಗರ ತಾಲ್ಲೂಕಿನ ಹುಂಚ ಅಥವಾ ಹೊಂಬುಜದ ಪದ್ಮಾವತಿಯ ಬಸದಿ, ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಐನಾಪುರ ಬಸದಿ, ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಸೀಮೆ ಬಸದಿ ಹಾರಿಗೆ ಹಾಗೂ ಕರ್ನಾಟಕದಾಚೆಯ ಝಾರ್ಖಂಡ್‌ನ ಜೈನರ ಪವಿತ್ರ ಸ್ಥಳ ಇಪ್ಪತ್ತು ತೀರ್ಥಂಕರರು ಮೋಕ್ಷ ಸಾಧಿಸಿದ ಸಮ್ಮೇದ ಶಿಖರ್ಜಿ, ಶ್ರೀ ಕ್ಷೇತ್ರಪಾಲ ಸ್ತವನಿಧಿ ಈ ಎಲ್ಲಾ ಜೈನ ಕ್ಷೇತ್ರಗಳ ಕುರಿತು ಜನಪದ ಗೀತೆಗಳನ್ನು ತ್ರಿಪದಿ ಶೈಲಿಯಲ್ಲಿ ಹಾಡಿರುವುದನ್ನು ಗಮನಿಸಬಹುದು.

ಜೈನರಲ್ಲಿ ಶ್ರೇಷ್ಠರಾದ ತ್ರಿಷಷ್ಠಿ ಶಲಾಕಾ ಪುರುಷರಲ್ಲಿ ಕೆಲವರನ್ನು ಕುರಿತು ಹಾಡುವ ಭಕ್ತಿಗೀತೆಗಳಂತೆ ಜನಪದ ಗೀತೆಗಳು ಇರುವವು. ಅರವತ್ತಮೂರುಮಂದಿಯಲ್ಲಿ ತೀರ್ಥಂಕರರು, ಚಕ್ರವರ್ತಿಗಳು, ನಾರಾಯಣರು, ಪ್ರತಿ ನಾರಾಯಣರು(9), ಬಲಭದ್ರರು(9) ಇವರಲ್ಲಿ ತೀರ್ಥಂಕರರ ಕುರಿತು ಜಾಸ್ತಿ ಜನಪದ ಹಾಡುಗಳ ರಚನೆ ವಿಶೇಷವಾದುದು. ಇವರಲ್ಲದೆ ಇನ್ನೂ ಇಪ್ಪತ್ತನಾಲ್ಕು ಮಂದಿ ಮನ್ಮಥರು, ನಾರಾದರೂ ಕಂಡುಬರುತ್ತಾರೆ. ಸೋದೆ ಸ್ವಾಮಿ, ಜಿನದತ್ತರಾಯ, ನಾಗಕುಮಾರ ಅಥವಾ ವರಚಂದ್ರ ಮೊದಲಾದ ವಿಶೇಷ ಜೈನ ಆದರ್ಶಪುರುಷರ ಕುರಿತು ಕೆಲವು ಜೈನ ಜನಪದಗಳು ಕಂಡುಬರುತ್ತವೆ. ಆದರೆ ಇವೆಲ್ಲಾ ಭಕ್ತಿಗೀತೆಯ ಮಾದರಿಯಲ್ಲಿ ಜನಪದರೊಂದಿಗೆ ಉಳಿದುಹೋಗಿವೆ.

ಜೈನರು ಕೆಲಸ ಮಾಡುವಾಗ ಧಣಿವಿಗೆ, ಸಂತೋಷಕ್ಕೆ ಆಡುವ ಕೆಲವು ಕೋಲಾಟದ ಹಾಡುಗಳು ಕಂಡುಬರುತ್ತವೆ. ಆದರೆ ಇವು ಬಸದಿಗಳ ಬಳಿ ಹಾಡುವ ಹಾಡುಗಳಾಗಿ ಕಂಡುಬರುತ್ತವೆ. ಕೃಷಿ ಕಾರ್ಯಕುರಿತು ಯಾವುದೇ ವಿಚಾರ ಕಂಡುಬರುವುದಿಲ್ಲ. ಹೆಂಗಸರು ಬೀಸುವ, ಕುಟ್ಟುವ, ಮಕ್ಕಳಾಡಿಸುವ, ಭತ್ತಕಣಜಕ್ಕೆ ತುಂಬುವ, ಮೊಸರು ಕಡೆಯುವ ಮೊದಲಾದ ಹಾಡುಗಳು ಜನಪದರ ಕಾರ್ಯದೊಂದಿಗೆ ಜಿನನರಕೆಯಂತೆ ಮೂಡಿಬಂದಿವೆ.

ಆಕಳ ಮಜ್ಜಿಗೆ ತೂಕದ ಕಡೆಗೋಲು
ಯಾಕವ್ವಾ ಬೆಣ್ಣೆ ಬರಲಿಲ್ಲ। ತುಪ್ಪದ
ದೀಪ ಹಚ್ಚಿಸುವೆ ಜಿನರೀಗೆ॥

ಈ ಮಾದರಿಯಲ್ಲಿ ಕಂಡುಬರುತ್ತವೆ. ಎಲ್ಲಾ ಧರ್ಮದ ಜನಪದರಲ್ಲಿಯೂ ಈ ಕಾಯಕನಿಷ್ಠೆಯ ಜೊತೆಗೆ ದೇವರ ಬಲದ ಅನುಗ್ರಹವನ್ನು ಬೇಡುತ್ತಾರೆ.

ಡಿ.ಎನ್. ಅಕ್ಕಿ ಹಾಗೂ ಶ್ರೀಮತಿ ಶ್ರೀಕಾಂತಮ್ಮ ಇವರು ಸಂಗ್ರಹಿಸಿರುವ, ಹಾಡಿರುವ ನೂರಾ ಎಂಟು ತ್ರಿಪದಿಗಳನ್ನು 'ಜೈನ ಜನಪದ ಹಾಡುಗಳು' ಎಂಬ ಕೃತಿಯಾಗಿ ಪ್ರಕಟಿಸಿದ್ದಾರೆ. ಜೊತೆಗೆ 'ಸಗರ ನಾಡಸಿರಿ'

ಜೈನ ಜನಪದ ಗೀತೆಗಳು, 'ಹಡೆದವ್ವ ಹಾಡ್ಯಾಳ' ಎಂಬ ಹಾಡಿದ ಗೀತೆಗಳನ್ನು ಕೃತಿಯಾಗಿ ತಂದಿದ್ದಾರೆ. ಜೈನ ಜನಪದರು ಬೀಸುವಾಗ, ಕುಟ್ಟುವಾಗ ಹಾಡುವ ಹಾಡುಗಳು ವಿಶೇಷವಾಗಿ ಕಂಡುಬರುತ್ತವೆ.

ಏಳೂತ ನೆನೆದೇನ ಏಳೆಂಟ ದೇವರನ
ಚಾರಣಗೇರಿ ಚಲುವನ। ಪಾರಿಸನಾಥನ
ಏಳೂತ ಮೊದಲ ನೆನದೇನ॥

ಈ ಹಾಡುಗಳಿಗೆ ಒಂದೊಂದು ಐತಿಹ್ಯವಿದೆ. ಜೈನ ತೀರ್ಥಂಕರರ ಯಾತ್ರೆಯ ಚರಿತ್ರೆಯನ್ನೂ ದಾಖಲು ಮಾಡಲಾಗಿದೆ. ಉದಾಹರಣೆಗೆ ಈ ಮೇಲಿನ ತ್ರಿಪದಿಯಲ್ಲಿ ಚಾರಣಗಿರಿ ಬೆಟ್ಟದಲ್ಲಿರುವ ಪಾರ್ಶ್ವನಾಥರ ಉಬ್ಬುಶಿಲ್ಪವನ್ನು ಪ್ರಾರ್ಥಿಸುವ ಕ್ರಮವನ್ನು ಕಾಣಬಹುದು. ಹಾಗೇಯೇ ತಮ್ಮ ಕುಟುಂಬದ ವ್ಯಕ್ತಿಗಳನ್ನು ಹಾಡಿನ ನಡುವೆ ಸೇರಿಸುವ ಕೆಲವು ಉದಾಹರಣೆ ಕಂಡುಬರುತ್ತವೆ. ಅವರ ಭಕ್ತಿ, ಶುಭಕೋರುವ ಚಿತ್ರಣಗಳು ಕಂಡುಬರುತ್ತವೆ.

ಹೀಗೆ ಗ್ರಾಮಜಗತ್ತಿನ ಮಹಿಳೆಯರು ಹಾಡುವ, ಹಾಡಿದ ಗೀತೆಗಳನ್ನು ಅಧ್ಯಯನ ದೃಷ್ಠಿಯಿಂದ ಗಮನಿಸಲಾಗಿದೆ. ಪ್ರಸ್ತುತ ಕೂಡ ಜೈನ ಕುಟುಂಬಗಳಲ್ಲಿ ಯಾವುದೇ ಕುಟುಂಬದ ಕಾರ್ಯಕ್ರಮಕ್ಕೆ ಬಲ್ಲವರು ಬಹಳ ಜನ ಇಂದಿಗೂ ಹಾಡಬಲ್ಲರು. ಜೈನ ಬಸದಿಗಳಲ್ಲಿ ಭಜನೆಯ ರೀತಿಯಲ್ಲಿ ಭಕ್ತಿಗೀತೆಗಳಂತೆ ಹಾಡುವರು. ಇಲ್ಲಿನ ಕೆಲವು ಜನಪದ ಹಾಡುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಬಡತನದ ಹೆಣ್ಣುಮಕ್ಕಳು ಕಟ್ಟಿದ ಹಾಡುಗಳಂತೆ ಕಾಣುವುದಿಲ್ಲ. ಅಕ್ಷರಲೋಕದಿಂದ ದೂರ ಉಳಿದವರು ಕೂಡ ಕೆಲವು ಇಂತಹ ಪ್ರಬುದ್ಧ ಗೀತೆಗಳನ್ನು ಕಟ್ಟಲು ಕಷ್ಟಕರ. ಏಕೆಂದರೆ ಇಲ್ಲಿ ಮದುವೆ ಸಂಪ್ರದಾಯಗಳಲ್ಲಿ ಅತ್ಯಂತ ಸಂಪ್ರದಾಯಬದ್ಧವಾಗಿ, ಪ್ರಬುದ್ಧ ಭಾಷೆಯ ಮೂಲಕ ಗೀತೆಗಳನ್ನು ಕಾಣಬಹುದು. ಜೈನರಲ್ಲಿ ಇಂದಿಗೂ ಧರ್ಮ ನಿಷ್ಠೆಯು ಸಮಾಜದ ಕಲ್ಯಾಣಕ್ಕಾಗಿ ತುಡಿಯುವುದನ್ನು ಈ ಹಾಡುಗಳ ಮೂಲಕ ತಿಳಿಯಬಹುದು. ಸಂಪ್ರದಾಯ, ಆಚರಣೆಗಳನ್ನು ಮುಂದಿನ ತಲೆಮಾರುಗಳಿಗೆ ವರ್ಗಾಹಿಸಲು ಸಾಕಷ್ಟು ಮಾಧ್ಯಮ ಮಾರ್ಗೀಯ ಕೆಲಸಗಳು ಆಗಬೇಕಿದೆ. ಭಕ್ತಿಯ ಹಾಗೂ ಧರ್ಮದ ನೆಲೆಯಲ್ಲಿ ಆವೀರ್ಭವಿಸಿರುವ ಕಾರಣ ಜೈನತತ್ವಗಳು ಇಂದಿಗೂ ಸಮಾಜದ ಮುಕ್ತತೆಗೆ ತೆರೆದುಕೊಂಡಿಲ್ಲ. ಜಿನಸಮ್ಮಿಲನದ ಹೆಸರಿನಲ್ಲಿ ಇಂದಿನ ಜೈನರು ಇಂತಹ ಸಾಹಿತ್ಯ ಉಳಿಸುವ ಕಾರ್ಯ ಮಾಡುತ್ತಿದ್ದಾರೆ. ಜನರಿದ್ದಲ್ಲಿ ಜನಪದವಿರುತ್ತದೆ. ಜನಪದದ ಸರ್ವಬೇರುಗಳೂ ಜಗತ್ತಿನ ಜಾನಪದವನ್ನು ರಕ್ಷಿಸುತ್ತವೆ.

**ಪರಾಮರ್ಶನ ಗ್ರಂಥಗಳು**


1. ಮಲ್ಲಿಗೆ ದಂಡೆ., 1935., ಕಾಪಾಸೆ ರೇವಪ್ಪ(ಸಂ)., ಮುನ್ನುಡಿ., ಮಧುರಚೆನ್ನ., ಜಯಕರ್ನಾಟಕ, ಕಾರ್ಯಾಲಯ, ಧಾರವಾಡ
2. ಜಾನಪದ ಗೀತೆಗಳು., ಮುನ್ನುಡಿ., ಎಂ. ಜೀವನ., ಸಿಟಿ ಬುಕ್ ಸ್ಟಾಲ್, ಹುಬ್ಬಳಿ
3. ಗರತಿಯ ಹಾಡು., 1990., ಹಲಸಂಗಿಯ ಚೆನ್ನಪ್ಪ, ಲಿಂಗಪ್ಪ, ರೇವಪ್ಪ., ಪರಿಚಯ ನುಡಿ, ದ.ರಾ ಬೇಂದ್ರೆ., ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
4. ಜೈನಧರ್ಮಪರಿಭಾಷೆ., 1930., ಮಹಾದೇವ ಪ್ರಭಾಕರ ಪೂಜಾರ., ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ
5. ಜೈನ ಜನಪದ ಗೀತೆಗಳು., 2014., ಪದ್ಮಪ್ರಸಾದ್ ಎಸ್.ಪಿ., ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು
6. ಜಿನಧರ್ಮ ದರ್ಪಣ ಪ್ರಶ್ನೋತ್ತರ ಮಾಲಾ., 2000., ರಾಮಚಂದ್ರ ಸ್ಯಾದ್ವಾದಿ ಸಿ., ಶ್ರೀ ಪಚ್ಚೆಪಾರ್ಶ್ವನಾಥಸ್ವಾಮಿ ಧರ್ಮಗ್ರಂಥ ಪ್ರಕಾಶನಾ ಸಮಿತಿ, ತುಮಕೂರು
7. ಜೈನ ಸ್ತೋತ್ರಸಾರ ಸಮುಚ್ಚಯ., 1953., ಶ್ರೀ 105 ಅತಿಬಲ ಗ್ರಂಥಮಾಲೆ, ಬೆಳಂಗಾವಿ
8. ಹಾಡಾನ ಬನ್ನಿ ದನಿಯೆತ್ತಿ., 1981., ನಾಗೇಗೌಡ ಎಚ್.ಎಲ್., ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು